

# ಹೂಪ್ಸ್

## ಉಡುಪಿಗೆ ತಕ್ಕ ಕಿವಿಯೋಲೆ

**ಕಿವಿಯೋಲೆಗಳಲ್ಲಿ ನಾನಾ ಬಗೆ. ಇಟಾಲಿಯನ್ ಹೂಪ್ಸ್ ಇವುಗಳಲ್ಲೊಂದು. ಮಾರುಕಟ್ಟೆಗೆ ಬಂದು ಕೆಲವೇ ದಿನಗಳಲ್ಲಿ ಬಹುಸಂಖ್ಯೆಯ ಮಹಿಳೆಯರ, ಫ್ಯಾಷನ್‌ಪ್ರಿಯರ ಮನಗೆದ್ದ ಹೂಪ್ಸ್ ಕಿವಿಯೋಲೆ ಹೊಸ ಸಂಚಲನ ಮೂಡಿಸಿದ್ದಲ್ಲದೆ 'ಫ್ಯಾಷನ್ ಟ್ರೆಂಡ್' ಆಗಿಯೂ ಉಳಿದಿದೆ.**

■ ಪವಿತ್ರಾ ಶೆಟ್ಟಿ

ಇವತ್ತಿರುವ ಫ್ಯಾಷನ್ ನಾಳೆ ಹಳೆಯದಾಗುತ್ತದೆ. ದಿನಕ್ಕೊಂದು ಬಗೆಯ ವಿನ್ಯಾಸದ ಉಡುಪು, ಆ ಉಡುಪಿಗೆ ತಕ್ಕ ಸರ, ಬ್ಯಾಗ್, ಚಪ್ಪಲಿ ಎಲ್ಲವೂ ವಿಭಿನ್ನವಾಗಿರಬೇಕು ಎಂದು ಬಯಸುವ ಕಾಲವಿದು. ಅದರಲ್ಲೂ ಕಿವಿಯೋಲೆ ಎಲ್ಲಿಲ್ಲದ ಪ್ರಾಶಸ್ತ್ಯ ಪಡೆದುಕೊಂಡಿದೆ. ಏಕೆಂದರೆ ಹೆಣ್ಣಿನ ಅಲಂಕಾರ ಪೂರ್ಣಗೊಳ್ಳುವುದು ಅವಳು ಕಿವಿಯೋಲೆ ಧರಿಸಿದಾಗ. ಎಷ್ಟೇ ಅಲಂಕಾರ ಮಾಡಿಕೊಂಡಿದ್ದರೂ ಕಿವಿಯೋಲೆ ಧರಿಸದಿದ್ದರೆ ಅವಳ ಸೌಂದರ್ಯ ಎದ್ದು ಕಾಣುವುದೇ ಇಲ್ಲ. ಧರಿಸುವ ಬಟ್ಟೆಗೆ ತಕ್ಕಂತೆ ಕಿವಿಯೋಲೆ ಧರಿಸಿದರೆ ಅವಳ ಮುಖದ ಅಂದ ಇನ್ನಷ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ.

ಹೆಣ್ಣು ಮಕ್ಕಳಿಗೆ ಕಿವಿಯೋಲೆ ಎಂದರೆ ಅಚ್ಚುಮೆಚ್ಚು. ರಸ್ತೆಯ ಬದಿಯ ಅಂಗಡಿಯಿಂದ ಹಿಡಿದು ಶಾಪಿಂಗ್ ಮಾಲ್‌ಗೆ ಹೋದರೂ ಅವರ ಕಣ್ಣು ಇರುವುದು ಇಯರ್ ರಿಂಗ್ಸ್ ಮೇಲೆ. ಮೊದಲೆಲ್ಲಾ ಯಾವುದೇ ಉಡುಪು ಧರಿಸಿದರೂ ಕಿವಿಗೆ ಮಾತ್ರ ಚಿಕ್ಕದಾದ ಜುಮುಕಿನೋ, ಇಲ್ಲವೇ ಚಿಕ್ಕದಾದ ಚಿನ್ನದ ಗುಂಡು ಧರಿಸುತ್ತಿದ್ದರು. ಆದರೆ ಈಗ ದಿರಿಸಿಗೆ ತಕ್ಕ ಹಾಗೇ ಕಿವಿಯೋಲೆ ಧರಿಸಬೇಕು ಎಂದು ಬಯಸುತ್ತಾರೆ. ಬಗೆಬಗೆಯ ಕಿವಿಯೋಲೆಗಳು ಇಂದು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ದಿನ ನಿತ್ಯ ಉಪಯೋಗಿಸುವುದೇ ಒಂದು ಬಗೆಯಾದಾದರೆ ಪಾರ್ಟಿಗೆ ಒಂದು, ಮದುವೆ ಕಾರ್ಯಕ್ರಮಗಳಿಗೆ ಇನ್ನೊಂದು ಹೀಗೆ ಹತ್ತಾರು ಬಗೆಯ ಕಿವಿಯೋಲೆಗಳ ಸಂಗ್ರಹ ಹೆಣ್ಣುಮಕ್ಕಳ ಬಳಿ ಇರುತ್ತದೆ. ಕಲಾತ್ಮಕ ಮಿನಾಕರಿ, ಬೆಲ್, ಹೂಪ್ಸ್, ಕುಂದನ್, ಆಂಟಿಕ್ ವಿನ್ಯಾಸ, ಡ್ಯಾಂಗ್ಲರ್, ಪೋಲ್ಕಿ, ಪಂಜಾಬಿ ಶೈಲಿಯ ಜುಮಕಿಗಳು ಫಂಕ್ಷನ್‌ಗೆ ಹೇಳಿ ಮಾಡಿಸಿದ್ದವು. ಇನ್ನು ಡಾಂಗಲ್ಸ್, ಸ್ಟಡ್ಸ್, ಚಾಂದೆನಿಯರ್, ಹೂಪ್ಸ್, ಇವು ಕಾಲೇಜು ಬೆಡಗಿಯರ ನೆಚ್ಚಿನ ಆಯ್ಕೆಗಳಾಗಿವೆ. ಇವುಗಳನ್ನು ಸಾಂಪ್ರದಾಯಿಕ ಕಾರ್ಯಕ್ರಮಗಳಿಗೂ ಬಳಸುವ ಟ್ರೆಂಡ್ ಈಗ ಇದೆ.